# St. Claret College

Roll No:
Date:

## Autonomous, Bengaluru

UG END SEMESTER EXAMINATION-NOVEMBER 2025

BCOM/ BCOM TTM/ BBA, I SEMESTER

KAC 124, VANIJYA – NIRVAHANA KANNADA

TIME: 3 hours. 2 MAX. MARKS:80

This paper contains 03 printed pages and A to I parts

**Instructions:**

1. Verify and ensure that the question paper is completely printed.
2. Any discrepancies or questions about the exam paper must be reported to the COE within 1 hour after the examination.
3. Students must check the course title and course code before answering the questions.

ST. CLARET COLLEGE LIBRARY Bengaluru-13 AUTONOMOUS

## PART-A

ಇವುಗಳಲ್ಲಿ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ. 1x6=6

1. ನಮ್ಮ ಕವಿಗಳೆಂಬ ಕೋಡು
ತಲೆಗೆದಾವುದು
ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು ;
ಬಳಿಕ, ಬೇರೆ ಬೆಳೆದ ಹಣ್ಣು
ಬಳಿಗೆ ಸುಳಿದಳು ;

ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು,

2. ದಿನಕೆಂಟು ಅಪಘಾತ, ಖೂನಿ, ಚೋರಿ, ದರೋಡೆ;
ಕ್ಷೇಮ ನೆಮ್ಮದಿ ಸ್ವಾಸ್ಥ್ಯ ಕಾಡುಪಾಲು;
ಇನ್ನು ಮಕ್ಕಳು ಫೀಜು, ತೆರಿಗೆ, ವಿದ್ಯುತ್ ಬಿಲ್ಲು;
ಬೇಸಿಗೆಯಲ್ಲಿ ಹೊದ್ದಂತೆ ತಾಡಪಾಲು.

## PART-B

ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ. 2x2=4

3. ನಿಸಾರ್ ಅಹಮ್ಮದ್
4. ಪೂರ್ಣಚಂದ್ರ ತೇಜಸ್ವಿ
5. ತ್ರಿವೇಣಿ
6. ಜನಪದ

## PART-C

ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: 4x5=20

7. ಗಂಡ ಹೆಂಡಿರ ಜಗಳ ಬದುಕನ್ನು ಹೇಗೆ ಅರ್ಥಪೂರ್ಣವಾಗಿಸುತ್ತದೆ? ವಿವರಿಸಿ.
8. ಕನ್ನಡ ಅನ್ನದ ಭಾಷೆಯಾಗಲು ಅನುಸರಿಸಬೇಕಾದ ಕ್ರಮಗಳಾವುವು?
9. ಸ್ವಸಹಾಯ ಗುಂಪುಗಳ ಯಶಸ್ವಿ ಕಾರ್ಯನಿರ್ವಹಣೆಗೆ ನಿಮ್ಮ ಸಲಹೆಗಳಾವುವು?
10. ನಾಗರಿಕತೆಯ ದೊಡ್ಡ ಅನಾಹುತವಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳು ಯಾವುವು?

11. ಜೆನ್ ಹೇಳುವ ಹಾಗೆ ದೇವರನ್ನು ಕಾಣಬೇಕೆಂಬ ಹಂಬಲ ಹೇಗಿರಬೇಕು?

12. ಮೀಸಲಾತಿ ಎಂದರೇನು? ಇದರ ಮುಂದುವರಿಕೆ ಸರಿಯೇ? ಚರ್ಚಿಸಿ

## PART-D

**ಇವುಗಳಲ್ಲಿ ಮೂರು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿ : 3x10=30**

13 ಈ ಶತಮಾನದಲ್ಲಿ ಕನ್ನಡ ಭಾಷೆಯು ಎದುರಿಸುತ್ತಿರುವ ಸವಾಲುಗಳು ಯಾವುದು? ವಿವರಿಸಿ.

14. ಆಧುನಿಕತೆಯ ಪ್ರಭಾವವನ್ನು ನಮ್ಮ ನಗರ ಬದುಕು ಕವಿತೆಯಲ್ಲಿ ಹೇಗೆ ನಿರೂಪಿತವಾಗಿದೆ.

15. 'ಕೊನೆಯ ನಿರ್ಧಾರ' ಶೀರ್ಷಿಕೆ ಕಥೆಗೆ ಒಪ್ಪುತ್ತದೆಯೇ? ವಿಚಾರ ಮಾಡಿ.

16. ಯಶಸ್ವಿ ವ್ಯಾಪಾರದ ಹತ್ತು ರೀಟೇಲ್ ಬ್ಯುಸಿನೆಸ್‌ಗಳಾವುವು? ವಿವರಿಸಿ

17. ಹಣ ಮತ್ತು ಸಂಪತ್ತಿನ ಮಿತಿಯ ಬಗ್ಗೆ ವಾರೆನ್ ಬಫೆಟ್‌ನ ಅಭಿಪ್ರಾಯವನ್ನು ಚರ್ಚಿಸಿ.

## PART-E

**18. ಕೆಳಗಿನ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಬರೆಯಿರಿ. 1x5=5**

ಸಮಕಾಲೀನ ಬೆಳವಣಿಗೆಗಳಾದ ಆರ್ಥಿಕ ಉದಾರೀಕರಣ, ಮುಕ್ತ ಮಾರುಕಟ್ಟೆ, ಖಾಸಗೀಕರಣಗಳು ನಮ್ಮ ಜೀವನ ಮೌಲ್ಯಗಳ ಮೇಲೆ ಪರಿಣಾಮ ಬೀರಿಯೆ ಬೀರುತ್ತವೆ. ಈ ಚಾರಿತ್ರಿಕ ತಿರುವಿಗೂ ಸೋವಿಯತ್ ಸಾಮ್ರಾಜ್ಯದ ಪತನವೇ ನಾಂದಿ ಎನ್ನಬಹುದು. ಸ್ವಾತಂತ್ರ್ಯಾನಂತರ ನಾವು ಆರಾಧಿಸಿಕೊಂಡು ಬಂದ ಅನೇಕ ಸಮಾಜವಾದಿ ಮೌಲ್ಯಗಳು ಸಮರ್ಪಕವಾದುವಲ್ಲ ಎಂದು ಚರಿತ್ರೆ ತೋರಿಸಿ ಕೊಟ್ಟಿದೆ. ಬಡತನ ಹೆಚ್ಚಿದಂತೆ ತಮ್ಮ ಸಮಾನ ಸಂಕಷ್ಟಗಳಿಂದಾಗಿ ಶೋಷಿತರೆಲ್ಲಾ ಒಟ್ಟಾಗುತ್ತಾ ಜಗತ್ತು ಜಾಗತಿಕ ಕ್ರಾಂತಿಯತ್ತ ನಡೆಯುತ್ತದೆ ಎನ್ನುವ ಸಮತಾವಾದದ ಬುನಾದಿಯೆ ಆಂತರಿಕವಾಗಿ ಮತ್ತು ಅಂತರಾಷ್ಟ್ರೀಯವಾಗಿ ಸುಳ್ಳಾಯ್ತು, ಬಡತನ ಹೆಚ್ಚಿದಂತೆ ಬಡವರು ಹೆಚ್ಚಿನ ದುರಾಸೆಯವರೂ ತಮ್ಮ ಸಹೋದ್ಯೋಗಿಗಳಿಗೆ ದ್ರೋಹ ಬಗೆಯುವವರೂ ಆದರೇ ಹೊರತು ಜಾಗತಿಕ ಕ್ರಾಂತಿಗಾಗಿ ಒಟ್ಟಾಗುವವರಂತೂ ಆಗಲಿಲ್ಲ ಎನ್ನುವದು ಭಾರತದಲ್ಲಿ ತಲೆ ಎತ್ತಿದ ನೂರಾರು ಕಾರ್ಮಿಕ ಸಂಘಟನೆಗಳ ವರ್ತನೆಯಿಂದ ವೇದ್ಯವಾಗುತ್ತದೆ. ಅಂತರಾಷ್ಟ್ರಿಯ ಮಟ್ಟದಲ್ಲೂ ಇದೇ ದುಃಸ್ಥಿತಿಯನ್ನು ನಾವು ನೋಡಬಹುದು. ಮುಂದುವರಿದ ರಾಷ್ಟ್ರಗಳು ಕಾಮನ್ ಮಾರ್ಕೆಟ್ಗಳನ್ನೂ ಯೂರೋ, ಡಾಲರ್‌ಗಳನ್ನೂ ಸೃಷ್ಟಿಸುತ್ತಾ ಒಟ್ಟಾಗುತ್ತಿದ್ದರೆ ಬಡ ರಾಷ್ಟ್ರಗಳೆಲ್ಲಾ ಧರ್ಮದ ಹೆಸರಿನಲ್ಲಿ, ಇಲ್ಲವೇ ಜನಾಂಗಗಳ ಹೆಸರಿನಲ್ಲಿ ಪರಸ್ಪರ ಯುದ್ಧ ಮಾಡುತ್ತಾ ಮುಂದುವರಿದ ರಾಷ್ಟ್ರಗಳ ಆಯುಧ ತಯಾರಕರಿಗೆ ಖಾಯಂ ಗಿರಾಕಿಗಳಾಗಿದ್ದಾರೆ.

## PART-F

**19. ವರ್ಗಾವಣೆ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅರ್ಜಿ ಬರೆಯಿರಿ .1x4=4**

## PART-G

**ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. 1x4=4**

20. ಸೊಬಗು
21. ಧ್ಯಾನ
22. ರಾಜ್ಯಾಂಗ
23 ಹೊತ್ತು
24. ಬೆಳಗು

## PART-H

ಎರಡು ಪದಗಳಿಗೆ ಸ್ವಂತ ವಾಕ್ಯ ಬರೆಯಿರಿ. **1x2=2**

25. ಜಾಗತೀಕರಣ
26. ಶತಮಾನ
27. ಯಶಸ್ಸು
28. ನಗರ

## PART-I

ಇವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **1x5=5**

**29.** ಲಲಿತಾಳ ಗಂಡನ ಹೆಸರೇನು?

ಅ) ಮಲ್ಲೇಶ ಇ) ರಾಜೇಶ

ಆ) ಸಿದ್ದೇಶ ಈ) ವೆಂಕಟೇಶ

**30.** ಬಸವಣ್ಣನವರ ವಚನಾಂಕಿತ

ಅ) ಚೆನ್ನಮಲ್ಲಿಕಾರ್ಜುನ ಇ) ಕೂಡಲಸಂಗಮದೇವ

ಆ) ಗುಹೇಶ್ವರ ಈ) ನಾಸ್ತಿನಾಥ

**31.** 'ಸಂಜೆ ಐದರ ಮಳೆ' ಕೃತಿಯ ಕರ್ತೃ

ಅ) ಅಡಿಗ ಇ) ಕೆ.ಎಸ್. ನಿಸಾರ್ ಅಹಮ್ಮದ್

ಆ) ಕುವೆಂಪು ಈ) ಲಂಕೇಶ್

**32.** ಲಿಪಿ ಇರುವ ಭಾಷೆಯನ್ನು ಗುರ್ತಿಸಿ

ಅ) ಲಂಬಾಣಿ ಇ) ಕೊಂಕಣಿ

ಆ) ತುಳು ಈ) ಕನ್ನಡ

**33.** ಜಗತ್ತಿನ ಶ್ರೇಷ್ಠ ಹೂಡಿಕೆದಾರ ಯಾರು?

ಅ) ಸಚಿನ್ ತೆಂಡುಲ್ಕರ್ ಇ) ರಫೆಲ್ ನಡಾಲ್

ಆ) ವಾರನ್ ಬಫೆಟ್ ಈ) ರವೀಂದ್ರನಾಥ್ ಟ್ಯಾಗೂರ್

****